ಶ್ರೀ ಎನ್. ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ನೂರಕ್ಕಿಂತ ಹೆಚ್ಚು ಪೌರ ಕಾರ್ಮಿಕರು, ಅದರಲ್ಲಿ ಬಹುತೇಕ ಎಸ್‌ಸಿ–ಎಸ್‌ಟಿ ಯವರು. ಇಲ್ಲಿ ಸಮಸ್ಯೆ ಬಂದಿರುವುದು ಏನೆಂದರೆ, ಎಲೆಕ್ಟ್ರಿಕಲ್ ಸೆಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದಾರೆ, ಮೊನ್ನೆ ಷಾಕ್ ಹೊಡೆದು ಅಪಘಾತವಾಯಿತು, ಹೀಗಾಗಿ ಅವರ ಜೀವಕ್ಕೆ ಅಪಾಯ ಇದೆ. ಅಂಥ ಸನ್ನಿವೇಶದಲ್ಲಿ ಭದ್ರತೆ ಕೊಡುವ ಯಾವುದೇ ಕಾರ್ಯಕ್ರಮ ಆಗಿಲ್ಲ. ಕಳೆದ ಮೂರು ವರ್ಷಗಳಿಂದ ನಮ್ಮ ಎಂ.ಎಸ್. ಬಿಲ್ಡಿಂಗ್‌ನಲ್ಲಿ ಆ ಫೈಲ್ ಸುತ್ತಾಡುತ್ತಿದೆ. ಮಂಗಳೂರು ಮಹಾ ನಗರ ಪಾಲಿಕೆ ಅದಕ್ಕೆ ರೆಸಲ್ಯೂಷನ್ ಮಾಡಿದೆ, ಅವರನ್ನು ಖಾಯಂ ಮಾಡಬೇಕೆಂದು ನಿರ್ಣಯ ಮಾಡಿದ್ದರೂ ಕೂಡ ಯಾವುದೇ ರೀತಿಯಲ್ಲಿ ಅದಕ್ಕೆ ಅಧಿಕಾರಿಗಳಿಂದ ಸರಿಯಾದ ರೆಸ್ಪಾನ್ಸ್ ಸಿಗುತ್ತಿಲ್ಲ. ನಾನು ಕಳಕಳಿಯಿಂದ ಕೇಳುತ್ತಿದ್ದೇನೆ ಇಂಥದ್ದರ ಬಗ್ಗೆ ತುರ್ತಾಗಿ ಮಾನವೀಯತೆಯ ದೃಷ್ಟಿಯಿಂದ ಅದನ್ನು ಖಾಯಂಗೊಳಿಸುವಂಥ ಕಾರ್ಯವನ್ನು ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ಈಗ ಐ.ಪಿ.ಡಿ. ಸಾಲಪ್ಪನವರು ಏನು ಒಂದು ವರದಿ ಕೊಟ್ಟಿದ್ದಾರೆ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದಕ್ಕೆ ಪ್ರಾಮಾಣಿಕತೆಯಿಂದ ಹೇಳುವುದಾದರೆ, ನೋಡುತ್ತೇನೆ, ಮಾಡುತ್ತೇನೆ, ಎಂದು ಹೇಳುವುದಲ್ಲ. ಇದಕ್ಕೆ ಸಮಗ್ರವಾಗಿ ಐ ಪಿ ಡಿ ಸಾಲಪ್ಪನವರ ವರದಿಯನ್ನು ನೋಡಬೇಕಾಗುತ್ತದೆ. ಅವರ ಶಿಫಾರಸ್ಸುಗಳನ್ನು ಎಲ್ಲಿಯವರೆಗೆ ಜಾರಿಗೆ ಆಗಿವೆ ಎಂಬುದನ್ನು ನೋಡಬೇಕಾಗುತ್ತದೆ. ಕಟ್–ಆಫ್–ಡೇಟ್ ಬಗ್ಗೆ ಹೇಳಿದರು, ಸುಪ್ರೀಂ ಕೋರ್ಟು 1–1–1986 ಗೆ ಎಂದು ಹೇಳಿದ್ದಾರೆ. ಆದರೂ ಕೂಡ ಸಾಕಷ್ಟು ಜನ ಇದ್ದಾರೆ, ಇವೆಲ್ಲಾ ಏನಾಗುತ್ತದೆ ಎಂದರೆ, ಪುರಸಭೆಯಲ್ಲಿ ಕಾರ್ಪೊರೇಷನ್‌ನಲ್ಲಿ ಬೇರೆ ಕಡೆಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸಾಲಪ್ಪನವರ ವರದಿ ಏನಾಗಿದೆ ಎಂದು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಹೇಗೆ ವಿಧಾನ ಸಭೆಯಲ್ಲಿ ಅವಕಾಶ ಇದೆಯೋ ಹಾಗೆ ಇದೆ. ಇದನ್ನು ಮಾಡದೆ, ನಮ್ಮ ಒಬ್ಬರು ಸದಸ್ಯರು, ಮಂಗಳೂರು ಕಾರ್ಪೊರೇಷನ್ ನಲ್ಲಿ ಮಾಡಿದ ಬಗ್ಗೆ ಹೇಳಿದರು, ಅವರೂ ಕೂಡ ಇದು ಎಲ್ಲಾ ಪ್ರತಿಯೊಂದು ಹಂತದಲ್ಲಿ ಚರ್ಚೆ ಮಾಡಿ, ಅವರ ಸಮಸ್ಯೆಗಳು ಏನು ಎಂಬುದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಳ್ಳೆಯದಾಗುತ್ತದೆ. ಐ ಪಿ ಡಿ ಸಾಲಪ್ಪನವರ ವರದಿಯ ಬಗ್ಗೆ ನಮ್ಮ ಎಲ್ಲಾ ವಿರೋಧ ಪಕ್ಷದವರ ನಾಯಕರನ್ನು ಒಂದು ಸಭೆಗೆ ಕರೆಸಿ ಈ ವಿಧಾನ ಸಭೆ ಮುಗಿದು ಹೋದ ಮೇಲೆ 6 ಗಂಟೆಯ ನಂತರ, ತಾವು ಮಾನ್ಯ ಸಭಾಧ್ಯಕ್ಷರು ಬಂದರೂ ಸರಿ ಆಗುತ್ತದೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ, ಇದರ ಫೈನಾನ್ಸಿಯಲ್ ಇಂಪ್ಲಿಕೇಷನ್ ನೋಡೋಣ. ಏಕೆಂದರೆ, ಈಗಾಗಲೇ ಸುಪ್ರೀಂ ಕೋರ್ಟಿನ ಆದೇಶ ಕೊಟ್ಟ ಮೇಲೆ ಎಷ್ಟು ಜನರಿಗೆ ಏನೇನು ಆಗುತ್ತದೆ ಇವೆಲ್ಲಾ ನೋಡಬೇಕಾಗುತ್ತದೆ. ಇವೆಲ್ಲಾ ನೋಡಿ ನಾವು ಎಷ್ಟರಮಟ್ಟಿಗೆ ಇದನ್ನು ಮಾಡಬಹುದು ಎಷ್ಟರಮಟ್ಟಿಗೆ ನಾವು ಶಿಫಾರಸ್ಸಿಗೆ ಒಪ್ಪಬಹುದು ಎನ್ನುವುದು ಅಂತಿಮವಾಗಿ ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯವಾಗುತ್ತದೆ. ಆ ತರಹದ ಒಂದು ವ್ಯವಸ್ಥೆ ನಾವು ಮಾಡೋಣ.

ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಂಜುರಾತಿ

16 (441) : ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಾಸಗಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಸವದತ್ತಿ ಪಟ್ಟಣ 38,212 ರಷ್ಟು ಜನಸಂಖ್ಯೆ ಹೊಂದಿದ್ದು, ಧಾರ್ಮಿಕ ಸ್ಥಳವಾದ ಕಾರಣ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುತ್ತಿರುವುದು ನಿಜವಲ್ಲವೇ;

2) ಆರೋಗ್ಯ ದೃಷ್ಟಿಯಿಂದ ಒಳಚರಂಡಿ ನಿರ್ಮಿಸಲು ಬಹಳ ವರ್ಷಗಳಿಂದ ಪ್ರಸ್ತಾವನೆ ಸರ್ಕಾರದಲ್ಲಿ ನೆನೆಗುದಿಗೆ ಬಿದ್ದಿರುವುದರ ಬಗ್ಗೆ ಕೈಗೊಂಡ ಕ್ರಮಗಳೇನು;

3) ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ನಿರ್ಮಿಸಲು ಮಂಜೂರಾತಿ ಮಾಡಲು ಸರ್ಕಾರ ಈಗಲಾದರೂ ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

1) ಹೌದು.

2) ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ರೂ. 660.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಯೋಜನೆಗೆ ಸ್ಥಳೀಯ ಸಂಸ್ಥೆಯ ವಂತಿಗೆಯಾದ ಶೇ. 20 ರಂತೆ ರೂ. 132.00 ಲಕ್ಷಗಳನ್ನು ಪುರಸಭೆ ಭರಿಸದ ಕಾರಣ ಯೋಜನೆ ಅನುಮೋದನೆಗೊಂಡಿರುವುದಿಲ್ಲ. ತದನಂತರ ಯೋಜನೆಯನ್ನು ಕೇಂದ್ರ ಸರ್ಕಾರದ ಪುರಸ್ಕೃತ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು ಅದರಂತೆ ಸವದತ್ತಿ ಪಟ್ಟಣದ ಸರ್ವೇಕ್ಷಣೆ ಕಾಮಗಾರಿ ಪೂರ್ಣಗೊಳಿಸಿ ಹೈಡ್ರಾಲಿಕ್ ನಕ್ಷೆಗಳನ್ನು ಈಗಾಗಲೇ ತಯಾರಿಸಲಾಗಿದೆ. ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

3) ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ ಪರಿಶೀಲಿಸಲಾಗುವುದು.

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ : ಮಾನ್ಯ ಅಧ್ಯಕ್ಷರೆ, ಸವದತ್ತಿ ಯಲ್ಲಮ್ಮ ಪುರಸಭೆ ಸುಮಾರು 40 ಸಾವಿರ ಜನಸಂಖ್ಯೆ ಹೊಂದಿದೆ. ಆದರೆ, ಇಲ್ಲಿ ಇವತ್ತಿನವರೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಿಕೊಟ್ಟಿಲ್ಲ. ಇದಕ್ಕಾಗಿ ಸುಮಾರು 6 ಕೋಟಿ 60 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಮಾಡಿದ್ದಾರೆ. ಇದಕ್ಕೆ 20 ಪರ್ಸೆಂಟ್ ಹಣವನ್ನು ಮುನಿಸಿಪಾಲಿಟಿಯವರು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ, ಅಲ್ಲಿನ ಮುನಿಸಿಪಾಲಿಟಿ ಇಷ್ಟು ಹಣ ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ 1 ಕೋಟಿ 20 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಟ್ಟರೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಇದಲ್ಲದೆ, ಎರಡು--ಮೂರು ವರ್ಷದ ನ್ಯಾಷನಲ್ ರಿವರ್ ಆಕ್ಷ್ಯನ್ ಪ್ಲಾನ್ ಅಡಿಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಆದರೆ, ಇದೂ ಕೂಡ ಕಾರ್ಯಗತ ಆಗಿಲ್ಲ. ಇವತ್ತಿನದಿವಸ ಅಲ್ಲಿ ಏನಾಗಿದೆ ಎಂದರೆ, ಒಳಚರಂಡಿಯ ನೀರು ಮಲಪ್ರಭ ನದಿಗೆ ಸೇರಿ ಅಲ್ಲಿರತಕ್ಕಂಥ ಹುಬ್ಬಳ್ಳಿ-ಧಾರವಾಡ ವಾಟರ್ ಸಪ್ಲೈ ಮತ್ತು ಸವದತ್ತಿ ನಗರಕ್ಕೆ ನೀರು ಸರಬರಾಜು ಆಗುತ್ತಿರುವ ಜಾಕವೆಲ್‌ಗೆ ಈ ಒಳಚರಂಡಿ ನೀರು ಸೇರುತ್ತಿವೆ. ಇದರಿಂದ 100 ಪರ್ಸೆಂಟ್ ಪಲ್ಯೂಷನ್ ಫ್ರೀ ವಾಟರ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಳಚರಂಡಿ ವ್ಯವಸ್ಥೆ ಅಲ್ಲಿ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಕೆಲಸವನ್ನು ರಾಜ್ಯವಲಯದ ಮೂಲಕ ತೆಗೆದುಕೊಳ್ಳಲಾಗುತ್ತದೆಯೇ ಎನ್ನತಕ್ಕಂಥದ್ದನ್ನು ನಾನು ಕೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಸವದತ್ತಿ ಪಟ್ಟಣದ ಬಗ್ಗೆ ಹೇಳಬೇಕಾದರೆ, ಒಳಚರಂಡಿ ವ್ಯವಸ್ಥೆ ಪ್ರಾಜೆಕ್ಟ್‌ನ್ನು ಹಿಂದೆ ತೆಗೆದುಕೊಂಡಾಗ ಇದಕ್ಕೆ ಅವರು 20 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಲಿಲ್ಲವೆಂದು ಆ ಕೆಲಸ ನಿಂತುಹೋಗಿತ್ತು. ಆದರೂ ಕೂಡ ಇದನ್ನು

ಬಿಡುವುದಿಲ್ಲ. ಬರುವ ವರ್ಷದಲ್ಲಿ ಕರ್ನಾಟಕ ರಿಫಾರ್ಮ್ಸ್ ಪ್ರಾಜೆಕ್ಟ್‌ನಲ್ಲಿ ಇದನ್ನು ಸೇರಿಸಿ ಸದರಿ ಕೆಲಸವನ್ನು ಪೂರ್ಣಮಾಡಿ ಕೊಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಮಾನ್ಯ ನಿರ್ಮಲ್ ಸುರಾನರವರೆ, ತಮ್ಮ ಪ್ರಶ್ನೆಯನ್ನು ವಸತಿ ಇಲಾಖೆಗೆ ವರ್ಗಾಹಿಸಲಾಗಿದೆ. ಈಗ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳು.

2(ಅ) ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 25.1.2005ರ 2ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 196 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ--1)

ಅಧ್ಯಕ್ಷರು : ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ: ಬೆನ್ನಿಹಿನ್ ಕಾರ್ಯಕ್ರಮ ಕುರಿತು

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ಅಥವಾ ಯಾವುದೇ ರೂಲ್ ಪ್ರಕಾರ ಪ್ರಮುಖವಾದಂಥ ಒಂದು ವಿಷಯವನ್ನು ತೆಗೆದುಕೊಳ್ಳಬೇಕೆಂದು ನೆನ್ನೆ ದಿವಸ ಬೆನ್ನಿಹಿನ್ ಕಾರ್ಯಕ್ರಮದ ಹಿನ್ನಲೆಯಲ್ಲಿ ನಾನು ತಮ್ಮ ಗಮನಕ್ಕೆ ತಂದಿದ್ದೆ. ನೆನ್ನೆದಿವಸ ಈ ವಿಷಯವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ, ನಾನು ಇವತ್ತು ತಮ್ಮ ಕೊಠಡಿಗೆ ಬಂದು ತಮ್ಮ ಜೊತೆ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಮಾತನಾಡುವುದಕ್ಕೆ ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಇವತ್ತು ಬೆಳಿಗ್ಗೆ 6.00 ಗಂಟೆಗೆ ನಾನು ಜಕ್ಕೂರ್ ವಿಮಾನ ನಿಲ್ದಾಣಕ್ಕೆ ಹೋಗಿದ್ದೆ. ಅಲ್ಲಿನ ಕಾರ್ಯಕ್ರಮಕ್ಕೆ ಚೆನ್ನೈನಿಂದ ಮೈಕ್‌ಸೆಟ್ ಮತ್ತು ಇತರೇ ಸಾಮಗ್ರಿಗಳು ಬಂದಾಗ ಇದಕ್ಕೆ ಕಟ್ಟಬೇಕಾಗಿದ್ದಂಥ 80 ಸಾವಿರ ರೂಪಾಯಿ ಕೊಟ್ಟಿಲ್ಲವೆಂದು ಮತ್ತು ಸುಂಕ ಮತ್ತು ವಲಸೆ ವಿಭಾಗದ ಅಧಿಕಾರಿಗಳು ಬೆನ್ನಿಹಿನ್ ವಿಮಾನದಲ್ಲಿದ್ದಾಗ ಅಲ್ಲಿಗೆ ಹೋಗಿ ತೆರಿಗೆ ಹಣ ಪಾವತಿ ಮಾಡಿಲ್ಲ ಎಂದು ಅವರನ್ನು ತಡೆದು ಕೇಳಿದಾಗ ಆ ಸಂದರ್ಭದಲ್ಲಿ ಮಾತಿನ ಚಕಮಕಿ ಆಗಿರತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ನಾನೂ ಕೂಡ ನೋಡಿದ್ದೇನೆ. ಇವತ್ತು ಜಕ್ಕೂರು ವಿಮಾನ ನಿಲ್ದಾಣ ಸಂಪೂರ್ಣವಾಗಿ ನಾಶವಾಗಿದೆ. ಮತ್ತೆ ಸುಮಾರು 8–10 ಲಾರಿ ತುಂಬುವಷ್ಟು ಪ್ಲಾಸ್ಟಿಕ್ ಚೀಲಗಳು ಅಲ್ಲಿ ಬಿದ್ದಿವೆ. ಮತ್ತೆ ಸಾಕಷ್ಟು ಗುಂಡಿಗಳು ಅಲ್ಲಿ ಬಿದ್ದಿವೆ. ಇನ್ನು ಎರಡು ತಿಂಗಳಾದರೂ ಅಲ್ಲಿ ವಿಮಾನ ಯಾನ ಮಾಡುವುದಕ್ಕೆ ಆಗದೇ ಇರತಕ್ಕಂಥ ವಿಚಿತ್ರ ಪರಿಸ್ಥಿತಿ ಅಲ್ಲಿ ತಲೆದೋರಿದೆ. ಈ ನಿಲ್ದಾಣವನ್ನು ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ವೈಮಾನಿಕ ಉದ್ದೇಶಕ್ಕಾಗಿ ಬಳಸುತ್ತಿದ್ದರು. ಇಲ್ಲಿ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಕೂಡ ಇದೆ. ಕಳೆದ ನಾಲ್ಕು ತಿಂಗಳಿಂದ ಈ ಒಂದು ಕಾರ್ಯಕ್ರಮಕ್ಕೆ ಕೆಲಸ ಪ್ರಾರಂಭವಾಗಿತ್ತು. ಇದಕ್ಕೆ ಯಾರು ಪರ್ಮಿಷನ್ ಕೊಟ್ಟಿದ್ದರು? ಮತ್ತು ಬೆನ್ನಿಹಿನ್ ಬರುತ್ತಾನೆಂದು ಯಾರು ಅವರಿಗೆ ತಿಳಿಸಿದ್ದರು? ಇದಕ್ಕೆ ನೀವು ಮೌಖಿಕವಾಗಿ ಯಾವರೀತಿಯಾಗಿ ಅನುಮತಿ ಕೊಟ್ಟಿದ್ದೀರಿ? ಸಂಬಂಧಪಟ್ಟಂಥ ಇಲಾಖೆಯಿಂದ ಅಂದರೆ, ಏರ್‌ಪೋರ್ಸ್ ಅಥಾರಿಟಿಯಿಂದ ಈ ಮೈದಾನ ಉಪಯೋಗ ಮಾಡುವುದಕ್ಕೆ ಅನುಮತಿ ತೆಗೆದುಕೊಂಡಿದ್ದೀರಾ? ಆದ್ದರಿಂದ, ಇದಕ್ಕೆ ತಾವು ಹೇಗೆ ಅನುಮತಿ ಕೊಟ್ಟಿದ್ದೀರಿ? ಇದು ನನ್ನ ಮೊದಲನೇ ಪ್ರಶ್ನೆಯಾಗಿದೆ. ಎರಡನೇ ಪ್ರಶ್ನೆ